# ಯುಗಾದಿ ವಿಶೇಷಾಂಕ-2020

### ಮನೆಗೆ ಬಂದ ಪ್ರೀತಿಯ ಮಗಳು

'ಸುಧಾ' ಯುಗಾದಿ ವಿಶೇಷಾಂಕದ ಮುಖಪುಟ ಸುಂದರವಾಗಿದೆ. ಭಾವಪೂರ್ಣ ಚಿತ್ರದಿಂದ, ಕಣ್ಣುಗಳೇ ತುಂಬಿಕೊಂಡು ನಗುವಿನಿಂದ ತುಂಬಿ ತುಳುಕುವಂತೆ ರೂಪುಗೊಂಡಿದೆ. ಪ್ರಕೃತಿ ತನ್ನ ಹೊಸ ಜೀವ ಪಡೆದುಕೊಳ್ಳುತ್ತಿರುವ ಈ ಹೊತ್ತಿನಲ್ಲಿ, ಮನುಷ್ಯ ಅನೇಕ ತಲ್ಲಣ–ಆತಂಕಗಳನ್ನು ಮೀರಿ ನಾಳೆಯ ಬೆಳಕನ್ನು ಕಾಣಲು ಪ್ರಯತ್ನಿಸುತ್ತಿದ್ದಾನೆ. ಈ ಬೆಳಕಿನ ಹಂಬಲದ ರೂಪುಗಳಲ್ಲೊಂದು ಅರ್ಥಪೂರ್ಣ ಓದು. ಈ ಓದುವ ಖುಷಿ ತುಂಬಾ ಖಾಸಗಿಯಾದುದು. ನಾನಂತೂ ಈ ಖಾಸಗಿ ಖುಷಿಯನ್ನು ತಪ್ಪಿಸಿಕೊಳ್ಳುವುದಿಲ್ಲ.

ಈ ಅಕ್ಷರಗಳನ್ನು ಕಂಡುಹಿಡಿದವನಿಗೆ ಧನ್ಯವಾದಗಳನ್ನು ಹೇಳಬೇಕು. ಈ ಅಕ್ಷರಗಳು ಎಷ್ಟು ಜೀವಂತ ಎಂದರೆ, ಡಬ್ಬಿಯಲ್ಲಿರುವ ಕಾಳುಗಳು ನೀರು ಬಿದ್ದಾಕ್ಷಣ ಮೊಳಕೆ ಒಡೆದಂತೆ. ಸಂಪಾದಕೀಯದಲ್ಲಿ ಬರೆದಂತೆ ಸಂಚಿಕೆಯ ಎಲ್ಲ ಬರಹಗಳು ಸಮಾಜದ ಬೇರೆ ಬೇರೆ ಕ್ಷೇತ್ರಗಳ ಬಗೆಗಿನ ಮಾತುಗಳಾಗಿದ್ದರೂ, ಅವುಗಳೆಲ್ಲವೂ ಪಿಸುನುಡಿಯುತ್ತಿರುವುದು ಈ ಹೊತ್ತಿಗೆ ಅಗತ್ಯವಾದ ಸಾಮರಸ್ಯವನ್ನು. ಆ ಆಶಯದ ಸಾರವೇ ಇಡೀ ಸಂಚಿಕೆಯಲ್ಲಿ ಅನುರಣಿಸಿದೆ.

ಪ್ರಕೃತಿಯ ಅಂತರಂಗವನ್ನು ಹೀರಿಕೊಂಡ ಅಕ್ಷರ ಅರಿವಿನ ಅಂತಃಸ್ಫೂರ್ತಿಯನ್ನು ನೀಡುತ್ತಲೇ ಬಂದಿದೆ ಈ ಸಮಾಜಕ್ಕೆ. ನಾಲ್ಕೂ ಕಥೆಗಳು, ಜಯಂತ್–ಆರತಿ–ಕೆಂಚಣ್ಣನವರ ಕವಿತೆಗಳು ವಿಶೇಷವಾಗಿ ತಮಿಳು ಸಿನಿಮಾದ ದಲಿತ ಕಥನ (ಲೇ: ವಿಶಾಖ ಎನ್.), ಶ್ರೀನಿವಾಸಮೂರ್ತಿ ಅವರ ಮಾತುಗಳು (ಸಂ: ಪದ್ಮನಾಭ ಭಟ್), ಕರ್ನಾಟಕ ಟ್ವೆಂಟಿ20 – ಇವೆಲ್ಲ ನಿನ್ನೆ, ಇಂದು ಮತ್ತು ನಾಳೆಗಳ ಪಥ್ಯದಂತಿವೆ. ಹೀಗೆ ಅಕ್ಷರ ಜೀವಪದದ ಈ ಸಂಚಿಕೆ ಜೀವ ಸರಪಳಿ ಜೋಡಿಸುವ ಜಾನಪದದ ಹಾಡಿನಂತೆಯೇ ಕೇಳಿಸುತ್ತದೆ. ಈ ಸರಳ 'ಸುಧಾ' ಕನ್ನಡದ ಪ್ರೀತಿಯ ಮಗಳಾಗಿ ಮನೆಗೆ ಬಂದಂತಾಯಿತು.

—ಎಸ್. ತಥಾಗತ, ಬೆಂಗಳೂರು

## ಪ್ರತಿಕ್ರಿಯೆ

### ಬತ್ತದ 'ಜಯಂತತನ'

ಜಯಂತ ಕಾಯ್ಕಿಣಿಯವರ ಆ ಎರಡು ಪದ್ಯಗಳು ಇಡೀ ಸಂಚಿಕೆಗೇ ಮೆರುಗು ತಂದಿವೆ. ಎಂದೆಂದೂ ಬತ್ತದ 'ಜಯಂತತನ' ಪರಿಣಾಮಕಾರಿಯಾಗಿ ಒಡಮೂಡಿದೆ.

—ಜೀವನಮುಕ್ತ, ಮೈಸೂರು




### ಭರವಸೆಯ ಧ್ವನಿಗಳು

ಕನ್ನಡ ಸಿನಿಮಾದಲ್ಲಿ ಒಂದು ಸಿದ್ಧಸೂತ್ರವಿದೆ. ನಾಲ್ಕು ಹಾಡು, ಮೂರು ಫೈಟು, ಇವುಗಳ ಜೊತೆಗೊಂದು ಕಾಮಿಡಿ ಟ್ರ್ಯಾಕು. ಹೀರೊ ವಿಜೃಂಭಣೆ ಇದ್ದದ್ದೇ. ಈ ಸೂತ್ರಕ್ಕೆ ತಕ್ಕಹಾಗೆಯೇ ಬಹುತೇಕ ಸಿನಿಮಾಗಳು ರೂಪುಗೊಳ್ಳುತ್ತವೆ. ಕನ್ನಡ ಪತ್ರಿಕೆಗಳ ಯುಗಾದಿ–ದೀಪಾವಳಿ ವಿಶೇಷ ಸಂಚಿಕೆಗಳದು ಕೂಡ ಇದೇ ಸೂತ್ರವೇ. ನಾಲ್ಕೈದು ಕಥೆ, ಏಳೆಂಟು ಕವಿತೆ, ಸಿನಿಮಾ ಲೇಖನಗಳು, ಜೊತೆಗೊಂದೆರಡು ಲೇಖನ–ಇಷ್ಟಿದ್ದರೆ ವಿಶೇಷಾಂಕದ ಅಡುಗೆ ತಯಾರು. ಯಾವ ಪತ್ರಿಕೆ ಎಂದು ಹೆಸರು ನೋಡಿದರೆ ಸಾಕು, ಅಲ್ಲಿರುವ ಕಥೆಗಾರರು–ಕವಿಗಳು ಯಾರು ಎಂದು ಜಾಣ ಓದುಗ ಸುಲಭವಾಗಿ ಊಹಿಸಬಲ್ಲ. ಇಷ್ಟೆಲ್ಲ ಯಾಕೆ ಹೇಳಬೇಕಾಯಿತೆಂದರೆ, ಇಂಥ ಊಹೆಯನ್ನು ಈ ಬಾರಿಯ 'ಸುಧಾ ಯುಗಾದಿ ಸಂಚಿಕೆ' ಸುಳ್ಳು ಮಾಡುವ ರಿಸ್ಕ್‌ಗೆ ತನ್ನನ್ನು ಒಡ್ಡಿಕೊಂಡಿದೆ. ಸಿದ್ಧಸೂತ್ರಗಳನ್ನು ಮುರಿಯುವ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಭರವಸೆಯ ಹೊಸ ಕಥೆಗಾರರು, ಕವಿಗಳನ್ನು ಪರಿಚಯಿಸಿದೆ. ಈ ಹೊಸ ಧ್ವನಿಗಳಿಂದಲೇ ವಿಶೇಷಾಂಕದ ಶೋಭೆ ಹೆಚ್ಚಿದೆ.

—ವನಮಾಲಾ, ಬೆಂಗಳೂರು

### ರುಚಿಕರ ಪ್ರಬಂಧಗಳು

ಪ್ರಬಂಧ ಸ್ಪರ್ಧೆಯ ಬಹುಮಾನಿತ ಪ್ರಬಂಧಗಳು ಬಹುಕಾಲ ನೆನಪಿನಲ್ಲಿ ಉಳಿಯುವಂತಿವೆ. ಫಾತಿಮಾ ಅವರ ಪ್ರಬಂಧ ಸಮಕಾಲೀನ ತವಕ ತಲ್ಲಣಗಳನ್ನು ತಣ್ಣನೆ ದನಿಯಲ್ಲಿ ಕಟ್ಟಿಕೊಟ್ಟರೆ, ರಾಜೀವ ನಾರಾಯಣರ ಪ್ರಬಂಧ ಮುಂಬಯಿ ಮಹಾನಗರದ ಹಿನ್ನೆಲೆಯಲ್ಲಿ ಮಾನವೀಯ ಕಥನವೊಂದನ್ನು ಓದುಗರಿಗೆ ದಾಟಿಸುತ್ತದೆ. ಇನ್ನು ಆಕರ್ಷ ಕಮಲ ಅವರು ತೆರೆದಿಟ್ಟಿರುವ ಹಲವು ಬಾಗಿಲುಗಳ ನಡುವೆ ಸುಳಿದಾಡುವುದೇ ಒಂದು ಅಪೂರ್ವ ಸುಖ. ಮೂವರು ಪ್ರಬಂಧಕಾರರಿಗೂ ಅಭಿನಂದನೆಗಳು.

—ಮೋಹನ್‌ರಾಮ್ ಸಿ.ಆರ್., ತುಮಕೂರು

ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ:
ಶ್ರೀಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.